ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

**ಪ್ರಕಟಣೆಯ ಕೃಪೆಗಾಗಿ**

**ಗ್ರಾಮಾಭಿವೃದ್ಧಿಯಿಂದಲೇ ದೇಶದ ಪ್ರಗತಿ**

**ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರದಲ್ಲಿ** –ಪ್ರೊ.ಮಹದೇವ ಶಂಕನಪುರ

ಕೊಳ್ಳೇಗಾಲ: 17.3.2019 ಗ್ರಾಮಗಳು ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಪ್ರೊ.ಮಹದೇವ ಶಂಕನಪುರ, ಇತಿಹಾಸ ಪ್ರಾಧ್ಯಾಫಕರು, ಸರ್ಕಾರಿ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ ಇವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ವತಿಯಿಂದ ಹನೂರು ತಾಲ್ಲೋಕಿನ ಕಾಮಗೆರೆ ಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ಹಳ್ಳಿಗಳು ಅಭಿವೃದ್ಧಿ ಹೊಂದಿದರೆ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಮಹಾತ್ಮ ಗಾಂಧೀಜಿ ನಂಬಿದ್ದರು. ರಾಷ್ಟ್ರೀಯ ಸೇವಾ ಯೋಜನೆ ಗಾಂಧೀಜಿಯವರ ಅಚ್ಚುಮೆಚ್ಚಿನ ಕಲ್ಪನೆ. ಅವರು ಹುಟ್ಟಿದ ಮೂರು ವರ್ಷದ ಸ್ಮರಣೆಗೆ ಕೇಂದ್ರ ಸರ್ಕಾರ ಜಾರಿಗೆ ತಂದ ರಾಷ್ಟ್ರೀಯ ಸೇವಾ ಯೋಜನೆ ಇಂದು ಸುವರ್ಣ ಮಹೋತ್ಸವ ವರ್ಷವಾಗಲಿದೆ. ಗಾಂಧೀಜಿರವರ 150 ನೇ ಜಯಂತಿ ವರ್ಷವಾದ 2019 ರಲ್ಲಿ ದೇಶದಲ್ಲಿ 35 ಲಕ್ಷ ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ನೊಂದಾಯಿಸಿಕೊಂಡಿದ್ದಾರೆ. ಸಮಾಜದ ಪರಿವರ್ತನೆಗಾಗಿ ಆರೋಗ್ಯ ಭಾರತಕ್ಕಾಗಿ ಶ್ರಮಿಸುತ್ತಿದ್ದಾರೇ ತನ್ಮೂಲಕ ಯೋಜನೆಯು ಶಿಕ್ಷಣ ಮತ್ತು ಸೇವೆ ಪ್ರತಿಯೊಬ್ಬ ವ್ಯಕ್ತಿಯ ಬದುಕನ್ನು ಹಸನಾಗಿಸುತ್ತದೆ ಎಂಬ ಸಂದೇಶವನ್ನು ಸಾರುತ್ತಿದೆ ಎಂದು ತಿಳಿಸಿದರು.

ಮಧುವನ ಅರಸು, ಗಾಯಕರು ಹಾಗೂ ಅಧ್ಯಕ್ಷರು ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಚಾಮರಾಜನಗರ ರವರು ಶಿಬಿರಾರ್ಥಿಗಳ ಜೊತೆಯಲ್ಲಿ ಕಾಲೇಜಿನ ಇತರ ವಿದ್ಯಾರ್ಥಿಗಳೂ ಪಾಲ್ಗೊಂಡು ರಾಷ್ಟ್ರೀಯ ಸೇವಾ ಯೋಜನೆಯ ಧ್ಯೇಯೋದ್ದೇಶಗಳ ಈಡೇರಿಕೆಯಲ್ಲಿ ಕೈ ಜೋಡಿಸಬೇಕೆಂದರು.

ಜೆಎಸ್‌ಎಸ್ ಸ್ನಾತಕೋತ್ತರ ವಿಭಾಗದ ಪ್ರಾಧ್ಯಾಪಕಿ ಪ್ರೊ.ಅರ್ಚನ, ಕಾರ್ಯಕ್ರಮಾಧಿಕಾರಿ ಪ್ರೊ.ಬಸವರಾಜು, ಪ್ರೊ.ಪ್ರಕಾಶ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಶಿಬಿರಾರ್ಥಿಗಳು ಗ್ರಾಮದ ಬೀದಿಗಳಲ್ಲಿ ಮತದಾನದ ಜಾಗೃತಿ ಜಾಥಾ ನಡೆಸಿ ಮತದಾನ ನಮ್ಮ ಹಕ್ಕು, ಮತದಾನ ಮಾಡಿ ದೇಶ ಉಳಿಸಿ, ಮತದಾನ ಮಾಡಿ ಪ್ರಜಾಪ್ರಭುತ್ವ ಉಳಿಸಿ, ಮತದಾನ ಮಾಡಿ ದೇಶ ಪ್ರೇಮ ಗಳಿಸಿ ಇತ್ಯಾದಿಗಳ ಮೂಲಕ ಮತದಾನದ ಮಹತ್ವವನ್ನು ಗ್ರಾಮಸ್ಥರಿಗೆ ತಿಳಿಸಿಕೊಟ್ಟರು.

ಶಿಬಿರಾರ್ಥಿಗಳು ಗ್ರಾಮದ ಬೀದಿಗಳಲ್ಲಿ ಮತದಾನದ ಜಾಗೃತಿ ಜಾಥಾ ನಡೆಸುತ್ತಿರುವುದು.



ಶಿಬಿರಾರ್ಥಿಗಳು ಗ್ರಾಮದ ಬೀದಿಗಳಲ್ಲಿ ಮತದಾನದ ಜಾಗೃತಿ ಜಾಥಾ ನಡೆಸುತ್ತಿರುವುದು



ಶಿಬಿರಾರ್ಥಿಗಳು ಗ್ರಾಮದ ಬೀದಿಗಳಲ್ಲಿ ಮತದಾನದ ಜಾಗೃತಿ ಜಾಥಾ ನಡೆಸುತ್ತಿರುವುದು



ಪ್ರೊ.ಮಹದೇವ ಶಂಕನಪುರ, ಶಿಬಿರಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಅರ್ಚನ, ಶ್ರೀ ಮಧುವನಅರಸು, ರೆ.ಫಾ ಎಸ್.ಡಿ.ಜೋಸೆಫ್, ಪ್ರೊ.ಪ್ರಕಾಶ್ ಹಾಗೂ ಕಾರ್ಯಕ್ರಮಾಧಿಕಾರಿ ಪ್ರೊ. ಬಸವರಾಜು ರವರನ್ನು ಕಾಣಬಹುದು




ಶ್ರೀ ಮಧುವನಅರಸು,, ಶಿಬಿರಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಪ್ರೊ.ಅರ್ಚನ, ಪ್ರೊ.ಮಹದೇವ ಶಂಕನಪುರ, ರೆ.ಫಾ ಎಸ್.ಡಿ.ಜೋಸೆಫ್, ಪ್ರೊ.ಪ್ರಕಾಶ್ ಹಾಗೂ ಕಾರ್ಯಕ್ರಮಾಧಿಕಾರಿ ಪ್ರೊ. ಬಸವರಾಜು ರವರನ್ನು ಕಾಣಬಹುದು

